ಕೂಡುಜೀವನದ ವಾರ್ಷಿಕೋತ್ಸವ ಸಮಾರಂಭವನ್ನು ನಮ್ಮ ಫ್ಲ್ಯಾಟಿನಲ್ಲಿಯೇ ಅದ್ದೂರಿಯಾಗಿ ಆಚರಿಸಬೇಕೆಂದು ನಿರ್ಧರಿಸಿ ಪ್ರೊಫೆಸರರನ್ನ ಔತಣಕೂಟಕ್ಕೆ ಆಹ್ವಾನಿಸಲೆಂದು ಸಂಜೆ ಕಾರ್ಖಾನೆಯಿಂದ ನೇರವಾಗಿ ಅವರ ಮನೆಗೆ ಹೋದೆ. ಪ್ರೊಫೆಸರರು ಆಗಲೇ ಬಾರಿಗೆ ಹೋಗುವ ಅವಸರದಲ್ಲಿದ್ದರು. ಮನೆಗೆ ಬೀಗ ಹಾಕುತ್ತಿದ್ದವರು "ಅರೆ... ವಿಶಾಲ್... ಬಾ... ಏನು ಹೀಗೆ ದಿಢೀರೆಂದು ಫೋನು ಕೂಡ ಮಾಡದೇ ಬಂದುಬಿಟ್ಟೆ..." ಎಂದು ಆಶ್ಚರ್ಯ ವ್ಯಕ್ತಪಡಿಸಿ ಬಾಗಿಲು ತೆಗೆದು ಒಳಗೆ ನಡೆದರು.

"ಸರ್... ನಾನು ವಸುಂಧರೆಯನ್ನು ಕರೆದುಕೊಂಡು ಹೋಗಿ ನಾಡಿದ್ದು ಸರಿಯಾಗಿ ಒಂದು ವರ್ಷವಾಗುತ್ತದೆ..." ಎಂದು ನಮ್ರವಾಗಿ ನುಡಿದೆ.

"ಐ ನೋ... ಐ ನೋ..." ಎಂದು ಉತ್ತರಿಸಿ ಕುರ್ಚಿಯ ಕಡೆಗೆ ಕೈತೋರಿಸಿದರು.

"ಸರ್... ನಿಮ್ಮ ಸಂಶೋಧನೆ ಅದ್ವಿತೀಯವಾದದ್ದು. ಇದು ಸಂಪೂರ್ಣವಾಗಿ ಯಶಸ್ಸನ್ನು ಕಂಡಿದೆ. ಇದು ಜಗಜ್ಜಾಹೀರಾಗಿ ನೀವು ಈ ಜಗತ್ತಿನಲ್ಲಿ ಕೀರ್ತಿವಂತರಾಗಬೇಕು. ನನಗೊಬ್ಬ ಒಳ್ಳೆಯ ಸ್ನೇಹಿತೆಯನ್ನು ಮತ್ತು ಜೀವನಸಂಗಾತಿಯನ್ನು ನೀಡಿದಿರಿ. ನನಗೆ ಅವಳನ್ನು ಬಿಟ್ಟು ಬದುಕುವ ಶಕ್ತಿಯಿಲ್ಲ. ಐ ಲವ್ ಹರ್ ಸೋ ಮಚ್. ನಾನು ಶಾಸ್ತ್ರೋಕ್ತವಾಗಿ ಅಲ್ಲದಿದ್ದರೂ ಮಾನಸಿಕವಾಗಿ ವಸುಂಧರೆಯನ್ನು ಸ್ವೀಕರಿಸಿ ನನ್ನ ಮುಂದಿನ ಜೀವನವನ್ನು ಅವಳೊಂದಿಗೆ ನಡೆಸಬೇಕೆಂದಿದ್ದೇನೆ. ಇನ್ಯಾವ ಸಂಗಾತಿಯ ಅವಶ್ಯಕತೆಯೂ ನನಗಿಲ್ಲ. ತಾವು ದಯವಿಟ್ಟು ನನಗೆ ಅವಕಾಶ ಮಾಡಿಕೊಡಬೇಕು..." ಎಂದು ಕೈಮುಗಿದು ಹೇಳಿ ಕುರ್ಚಿಯಲ್ಲಿ ಕುಳಿತೆ.

"ವಾಟ್ ಎ ಸ್ಟುಪಿಡ್ ಥಾಟ್!..." ಎಂದು ಗುಡುಗಿದ ಪ್ರೊಫೆಸರರನ್ನು ಕಂಡು ನಾನು ಒಂದು ಕ್ಷಣ ದಂಗಾಗಿ ಹೋದೆ.

"ಅದೊಂದು ಜೀವವಿಲ್ಲದ ಯಂತ್ರ... ಇಟ್ಸ್ ಜಸ್ಟ್ ಎ ಮಷಿನ್... ಮಾನವನ ಅವಶ್ಯಕತೆಗಳಿಗಾಗಿ, ಆರಾಮಕ್ಕಾಗಿ, ಮನರಂಜನೆಗಾಗಿ ನಿರ್ಮಿತವಾಗಿರುವ ಯಂತ್ರಗಳಂತೆ ಅದೂ ಒಂದು ಯಂತ್ರ. ಮಾನವನಂತೆ ಅದು ಕೆಲಸಗಳನ್ನು ನಿರ್ವಹಿಸಬಹುದಾದರೂ ಅದಕ್ಕೆ ಸಂತಾನೋತ್ಪತ್ತಿಯ ಸಾಮರ್ಥ್ಯವಿಲ್ಲ..." ಎಂದು ತೀಕ್ಷ್ಣವಾಗಿ ನುಡಿದ ಪ್ರೊಫೆಸರರ ಮುಖ ಕೋಪದಿಂದ ಕೆಂಪಾಗಿತ್ತು.

"ಸಂತಾನೋತ್ಪತ್ತಿಯ ಸಾಮರ್ಥ್ಯವಿಲ್ಲದಿದ್ದರೂ ಅದೊಂದು ಸಮಸ್ಯೆಯೇ ಅಲ್ಲ ಸರ್... ನೀವು ಬುದ್ಧಿವಂತರು... ವೈದ್ಯಕೀಯ ರಂಗದಲ್ಲಿ ನಡೆಯುತ್ತಿರುವ ಸಂಶೋಧನೆಗಳ ಅರಿವು ನಿಮಗಿದೆ. ಅಂಡಾಣು ದಾನಿಗಳೂ ಸಿಗುತ್ತಾರೆ. ಅಂಡಾಣು, ವೀರ್ಯಾಣುಗಳನ್ನು ಮಾನವ ದೇಹದ ಹೊರಗೆ ಸಂಯೋಜಿಸಿ ಮಗುವನ್ನು ಪಡೆಯುವ ತಂತ್ರಜ್ಞಾನ ಹೊಸತೇನೂ ಅಲ್ಲ... ಇದರ ಬಗ್ಗೆ ನೀವು ಚಿಂತಿಸಬೇಕಾಗಿಯೂ ಇಲ್ಲ..." ಎಂದು ಕ್ಷೀಣದನಿಯಲ್ಲಿ ಉತ್ತರಿಸಿದೆ.

"ಇದು ನಿನ್ನ ಕೊನೆಯ ನಿರ್ಧಾರವೋ..." ಪ್ರೊಫೆಸರರ ದನಿಯಲ್ಲಿ ತೀವ್ರ ಆಕ್ಷೇಪವಿತ್ತು.

"ಹೌದು... ಸರ್..." ಎಂದು ಯಾವುದೇ ಆತಂಕವಿಲ್ಲದೆ ಶಾಂತಚಿತ್ತದಿಂದ ಉತ್ತರಿಸಿದೆ.

"ಸರಿ..." ಎಂದವರು ಎದ್ದು ಹೊರಟೇಬಿಟ್ಟರು! ನಾನೂ ಹೊರಗೆ ಬಂದೆ. ಬಾಗಿಲಿಗೆ ಬೀಗ ಜಡಿದವರು ನನ್ನತ್ತ ತಿರುಗಿಯೂ ನೋಡದೇ ಸರಸರನೆ ನಡೆದೇಬಿಟ್ಟರು! ನಾನು ಓಡೋಡಿ ಅವರನ್ನು ಹಿಂಬಾಲಿಸಿದೆ.

"ಸರ್... ಇನ್ನೊಂದು ರಿಕ್ವೆಸ್ಟ್... ನಾಡಿದ್ದು ನನ್ನ ಮತ್ತು ವಸುಂಧರೆಯ ಕೂಡುಜೀವನದ ವಾರ್ಷಿಕೋತ್ಸವವನ್ನು ನಿಮ್ಮ ಸಮ್ಮುಖದಲ್ಲಿ ಅದ್ದೂರಿಯಾಗಿ ಆಚರಿಸಬೇಕೆಂದಿದ್ದೇನೆ. ನೀವು ನಾಡಿದ್ದು ಸಂಜೆ ಏಳು ಗಂಟೆಯ ಹೊತ್ತಿಗೆ ನಮ್ಮ ಫ್ಲ್ಯಾಟಿಗೆ ತಪ್ಪದೆ ಬರಬೇಕು" ಎಂದು ವಿನಂತಿಸಿಕೊಂಡೆ.

"ಓಕೆ... ನೀನು ಇನ್ನು ಹೊರಡಬಹುದು" ಎಂದು ಹೇಳಿ ಪ್ರೊಫೆಸರರು ಹೊರಟು ಹೋದರು.